MYSORE LEGISLATIVE ASSEMBLY

Wednesday, 4th September 1968.

The House met in the Assembly Chamber, Vidhana Soudha, Bangalore, at One of the Clock.

Mr. Deputy Speaker (SRI D. MANJUNATH) in the Chair

OATH OR AFFIRMATION BY MEMBERS.

MR. DEPUTY SPEAKER.—Sri Konappa Rudrappa Nadgouda from Yadgir Constituency is to take the oath.

(*Then the Secretary called the name of Sri K. R. Nadgouda who took prescribed oath or made the affirmation*)

STARRED QUESTIONS

(to which oral answers were given

Government Pots Factory in Madikebeedu

16. SRI N. LOKAYYA NAIK (Virajpet).—

Will the Minister for Industries, Information and Publicity be pleased to state :—

(*a*) whether the Government Pots Factory in Madikebeedu, Post Mayamudi, Virajpet Taluk has been closed since few months ;

(*b*) if so, the reasons thereof ;

(*c*) whether the factory was working under loss ;

(*d*) if so, what would be the figure ;

(*e*) the steps Government propose to take for starting the said factory ?

Sri A. P. APPANNA (Deputy Minister for Industries).—

A.—(*a*) No.

(*b*) Does not arise in view of the reply to item No. (*a*) above.

(*c*) Yes.

(*d*) 1965–66 ... Rs. 20,605–13
1966–67 ... Rs. 19,532–05

(*e*) Does not arise in view of the reply to (*a*).

ಶ್ರೀ ಎನ್. ಲೋಕಯ್ಯ ನಾಯಕ್.—ಸ್ವಾಮಿ, ತಾವು ಉತ್ತರದಲ್ಲಿ ಹಂಚಿನ ಕಾರ್ಖಾನೆಯನ್ನು ಮುಚ್ಚಿಲ್ಲವೆಂದು ಹೇಳಿದ್ದೀರಿ. ಅಲ್ಲಿ ಈಗ ಹಂಚು ಏನಾದರೂ ತಯಾರಾಗುತ್ತಿದೆಯೇ?

†**Sri A. P. APPANNA.**—Actually it is not closed. There is some production but it is very little.

ಶ್ರೀ ಎನ್. ಲೋಕಯ್ಯ ನಾಯಕ್.—ಅಲ್ಲಿ ಈಗ ಎಷ್ಟು ನೌಕರರು ಕೆಲಸ ಮಾಡುತ್ತಿದ್ದಾರೆ?

†**Sri A. P. APPANNA.**—There are about three people who are regularly paid employees. Workers are taken as and when they are required.

ಶ್ರೀ ಎನ್. ಲೋಕಯ್ಯ ನಾಯಕ್.—ಈ ವರ್ಷದಲ್ಲಿ ಅಲ್ಲಿ ಎಷ್ಟು ಹೆಂಚು ತಯಾರಿಸಿದ್ದಾರೆ?

Sri A. P. APPANNA.—I have got the figures so far as the last three years are concerned. The figures are : in the year 1964–65, we have produced tiles worth Rs, 14,150; in the year 1965–66, we have produced tiles worth Rs. 11,980; in the year 1966–67, we have produced tiles worth Rs. 4,563.

Sri G. CHANDRAKANTH.—Is it not a fact that there is agreement between the Taluk Board and the Management of this Factory? I want to know whether the Taluk Board wants to take it over and run it?

Sri A. P. APPANNA.—Sir, in fact a decision was taken by the Government that in view of the fact that this Factory is being run uneconomically, it must be disposed of by tender. But later on, we thought that by disposing it of by tender, it may fetch little amount. So, we negotiated with taluk Board and the taluk Board is willing to take it on lease. We are trying to chalk out the terms and conditions with the Taluk Board. Very shortly we are going to hand over this Factory to the Virajpet Taluk Board management.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಮುಚ್ಚಿಲ್ಲದಿರುವಕ್ಕೆ ಮಡಿಕೆ ಕಾರ್ಖಾನೆಯಲ್ಲಿ 65–66ನೇ ಸಾಲಿನಲ್ಲಿ 20,605–13 ರೂಪಾಯಿ, 66–67ನೇ ಸಾಲಿನಲ್ಲಿ 19,532–05 ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೀರಿ. ಇವುಗಳು ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ನಷ್ಟವಾಗಿದೆ? ಇದಕ್ಕೆ ಕಾರಣಗಳೇನು?

ಶ್ರೀ ಎ. ಪಿ. ಅಪ್ಪಣ್ಣ.—ಅದಕ್ಕೆ ಹಾಕಿದಂಥ ಇನ್‌ವೆಸ್ಟ್‌ಮೆಂಟ್ ತೆಗೆದುಕೊಂಡರೆ ಪ್ರೊಡಕ್ಷನ್ ಜಾಸ್ತಿ ಮಾಡಬೇಕಾದರೂ ಸಿಬ್ಬಂದಿ ಖರ್ಚು ಜಾಸ್ತಿಯಾಗುತ್ತದೆ. ಈ ಕಾರ್ಖಾನೆಗೆ ಮಣ್ಣನ್ನು ತರಬೇಕಾದರೆ ಸುಮಾರು 35 ಮೈಲಿಗಳ ದೂರದಿಂದ ತರಬೇಕಾಗಿದೆ. ಅದಕ್ಕಾಗಿ ಟ್ರಾನ್ಸ್‌ಪೋರ್ಟೇಷನ್ ಕಾಸ್ಟ್ ಜಾಸ್ತಿಯಾಗಿ ಇದರಿಂದ ನಷ್ಟವುಂಟಾಯಿತು.

† Indicates that the remarks or speeches have not been revised by the member concerned

ಶ್ರೀ ಸಿದ್ಧಯ್ಯ ಕಾಶೀಮಠ.—ಈ ಕಾರ್ಖಾನೆಯನ್ನು ಮುಚ್ಚುವುದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಇದನ್ನು ಈಗಲಾದರೂ ಜೀರ್ಣೋದ್ಧಾರಮಾಡುವುದಕ್ಕೆ ಸರ್ಕಾರದವರು ಮನಸ್ಸುಮಾಡುತ್ತಾರೆಯೇ?

ಶ್ರೀ ಎ. ಪಿ. ಅಪ್ಪಣ್ಣ.—ಇದನ್ನು ಜೀರ್ಣೋದ್ಧಾರ ಮಾಡುವುದಕ್ಕಾಗಿಯೇ ನಾವು ಕೇರಳಾದಿಂದ ಒಬ್ಬ ಎಕ್ಸ್‌ಪರ್ಟ್‌ನ ಸಲಹೆ ಪಡೆದೆವು. ಇಕನಾಮಿಕ್ ರೀತಿಯಲ್ಲಿ ಹೇಗೆ ನಡೆಸಬಹುದು ಎಂದು ಕೇಳಿದಾಗ ಇನ್ನೂ 3 ಲಕ್ಷ ರೂಪಾಯಿಗಳನ್ನು ಇದಕ್ಕೆ ಹಾಕಬೇಕು ಎಂಬುದಾಗಿ ಅವರು ಸಲಹೆ ಕೊಟ್ಟರು. ಆ ಮೂರು ಲಕ್ಷ ರೂಪಾಯಿಗಳನ್ನು ಹಾಕುವುದಕ್ಕೆ ಸರ್ಕಾರ ತಯಾರು ಇಲ್ಲದೇ ಇರುವುದರಿಂದ ಖಾನಗೀಯವರಿಗೆ ಅದನ್ನು ಕೊಡಬೇಕೆಂದು ಈಗ ಸರ್ಕಾರ ತೀರ್ಮಾನಮಾಡಿದೆ.

Sri C. K. RAJAIAH SHETTY.—When all tile factories are working in profit, what is the special reason for this factory to work under loss? Government could have invested Rs. 3 lakhs because there are no tile factories round about. And in Malnad areas there is plenty of raw-material for this industry?

Sri A. P. APPANNA.—Sir, in the first instance, I do not agree with the hon. member that all the tile factories are working in profit. There are so many factories which are closed down. With regard to this factory, this cannot compete with the tile factories that exist in South Kanara. Regarding raw material, we have to get it from a long distance and the working season is very short because it is located in an area where there will be rains for many months.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರದವರು ಈ ಕಾರ್ಖಾನೆಯನ್ನು ನಡೆಸುವುದಕ್ಕೆ ಆಗದೆ ನಷ್ಟವಾಗುತ್ತಾ ಇರುವುದರಿಂದ, ಇದನ್ನು ತಾಲ್ಲೂಕು ಬೋರ್ಡ್‌ನವರು ಬಂಡವಾಳ ಹಾಕಿ ನಡೆಸಿದರೆ ಆ ಕಾರ್ಖಾನೆ ಚೆನ್ನಾಗಿ ನಡೆಯುತ್ತದೆಂದು ಹೇಳುವುದರಿಂದ ಈಗ ಅದನ್ನು ತಾಲ್ಲೂಕು ಬೋರ್ಡಿಗೆ ವಹಿಸುವುದಕ್ಕೆ ಮುಂಚಿತವಾಗಿ ಅವರೇನಾದರೂ ಯಾರಿಗಾದರೂ ಕಮಿಷನ್ ಕೊಟ್ಟು ನಡೆಸುವ ಉದ್ದೇಶವನ್ನು ಇಟ್ಟುಕೊಂಡಿದ್ದರೆ ಆ ರೀತಿ ಅವರು ನಡೆಸುವುದರಲ್ಲಿ ಲಾಭದಾಯಕವಾಗಿರುತ್ತದೆಯೇ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೇ?

ಶ್ರೀ ಎ. ಪಿ. ಅಪ್ಪಣ್ಣ.—ಈ ಕಾರ್ಖಾನೆಗೆ ಪರ್ಸನಲ್ ಮ್ಯಾನೇಜ್‌ಮೆಂಟ್ ಬೇಕಾಗಿದೆ. This tile factory is located within three miles radius of the taluk board office.....ಇದರಿಂದ ತಾಲ್ಲೂಕು ಬೋರ್ಡ್‌ನವರು ಸ್ವತಃ ತಾವೇ ಮ್ಯಾನೇಜ್‌ಮೆಂಟ್ ತೆಗೆದುಕೊಂಡು ನಡೆಸುವುದಾದರೆ ಅದಾಲ್ಲಿ ಸಿಬ್ಬಂದಿ ಖರ್ಚನ್ನು ಕಡಿಮೆ ಮಾಡಬಹುದು. ಅವರು ಅದನ್ನು ಪರಿಶೀಲನೆ ಮಾಡಿ ನಡೆಸಬಹುದು. ಆದರೆ ಸರ್ಕಾರದಿಂದ ಕೆಲವು ಸಹಾಯಗಳನ್ನು ಕೊಡಬೇಕೆಂದು ಅವರು ಕೇಳಿದ್ದಾರೆ. ಆ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಅವರು ಅದನ್ನು ಲೀಜ್ ರೂಪದಲ್ಲಿ ಕೊಡಬೇಕೆಂದು ಕೇಳಿದ್ದಾರೆ. 30 ಸಾವಿರ ರೂಪಾಯಿಗಳ ಸಾಲವನ್ನು ಕೊಡಬೇಕೆಂದು ಕೇಳಿದ್ದಾರೆ.

Sri KONDAJJI BASAPPA.—When the Government is not in a position to invest three lakh rupees on the advice by the expert, can they expect the taluk board to run the factory, Sir?

Sri A. P. APPANNA.—Sir, there are certain transactions which can be run more efficiently by local bodies than Government.

ಶ್ರೀ ಬಿ. ದೊಡ್ಡಬೋರೇಗೌಡ.—ಮಂತ್ರಿಗಳು ಉತ್ತರ ಕೊಡುವಾಗ 35 ಮೈಲಿಗಳಿಂದ ಮಣ್ಣನ್ನು ಸಾಗಿಸಬೇಕಾಗುತ್ತದೆ. ಅದರಿಂದ ನಷ್ಟವಾಯಿತು ಎಂದು ಹೇಳಿದರು. ಈ ಕಾರಣದಿಂದ ತಜ್ಞರ ವರದಿಯನ್ನು ತರಿಸಿಕೊಂಡು ಇದರಿಂದ ನಷ್ಟವಾಗುತ್ತದೆಯೇ ಅಥವಾ ಲಾಭವಾಗುತ್ತದೆಯೇ ಎಂಬುದನ್ನು ಸರ್ಕಾರದವರು ಏಕೆ ನೋಡಬಾರದು?

ಶ್ರೀ ಎ. ಪಿ. ಅಪ್ಪಣ್ಣ.—ವರದಿ ತರಿಸಿಯೇ ಇದನ್ನು ಸರ್ಕಾರ ನಡೆಸುವುದಕ್ಕಾಗುವುದಿಲ್ಲವೆಂದು ತಿಳಿದು ಬೇರೆಯವರಿಗೆ ಕೊಟ್ಟಿದ್ದು.

Sri H. SIDDAVEERAPPA.—You said there are three workers there. May I know how many are there on the managerial side and what is the wage paid to the three workers and the staff on the managerial side?

Sri A. P. APPANNA.—Sir, I have said that there are only three workers and the management. The worker is taken on contract basis as and when he is required. There is no permanent workers system as such.

ಶ್ರೀ ಎಚ್. ಲೋಕಯ್ಯನಾಯಕ್. - ಆ ಕಾರ್ಖಾನೆಯ ಟ್ರಾಕ್ಟರನ್ನು ಬಹಿರಂಗ ಹರಾಜಿನಲ್ಲಿ ಮಾರಿದ್ದಾರೆಂದು ಗೊತ್ತಾಗಿದೆ. ಅದರಲ್ಲಿ ಎಷ್ಟು ಹಣ ಬಂದಿದೆ?

ಶ್ರೀ ಎ. ಪಿ. ಅಪ್ಪಣ್ಣ.—ಆ ಕಾರ್ಖಾನೆಯ ಟ್ರಾಕ್ಟರನ್ನು ಬಹಿರಂಗ ಹರಾಜಿಗೆ ಇಟ್ಟು ಅದನ್ನು ಎರ್ಡಾ ಮುಖ್ಯ ಪತ್ರಿಕೆಗಳಲ್ಲೂ ಪ್ರಕಟಣೆ ಮಾಡಿ ಅನಂತರ ಅದಕ್ಕೆ ಟೆಂಡರ್ ಕಾರ್ಯಾಚಾರ್ ಮಾಡಿ ಅದನ್ನು ಹೆಚ್ಚಿನ ಬಿಡ್ಡರಿಗೆ ಕೊಟ್ಟಿದೆ. ಅದರಿಂದ ಎಷ್ಟು ಹಣ ಬಂದಿದೆ ಎಂಬುದು ಗೊತ್ತಿಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ. It should not be accused that we have done it without giving proper publicity.

Penicillin Reaction Cases

17. Sri SADASHIVAPPA PATIL (Deodurg).—

Will the Minister for Health be pleased to state :—

(*a*) the number of Penicillin reaction cases that have come to their notice during 1967-68;

(*b*) the action taken in the matter?

Ans.—Sri Y. RAMAKRISHNA (Minister for Health).—

(*a*) 52.

(*b*) Proper action has been taken to treat all of them and all have recovered.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ಯಾಮಿ, ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ 52 ಪ್ರಕರಣಗಳಿಗೆ ಎಲ್ಲರಿಗೂ ಚಿಕಿತ್ಸೆ ನೀಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳರಾಗಿದ್ದು ಎಲ್ಲರೂ ಗುಣಮುಖರಾಗಿದ್ದಾರೆ ಎಂದು ಹೇಳಿದ್ದೀರಿ. ಈ ಮನೆಯ ಮಾನ್ಯ ಸದಸ್ಯರೊಬ್ಬರಿಗೆ ಈ ರೀತಿ ಪೆನ್ಸಿಲಿನ್ ರೀಆಕ್ಷನ್ ಆಗಿ ಅವರು 24 ಘಂಟೆಗಳ ಕಾಲ ಜ್ಞಾನ ತಪ್ಪಿದ್ದಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ವೈ. ರಾಮಕೃಷ್ಣ.—ನಾನು ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಸದಾಶಿವಪ್ಪಪಾಟೀರ್—ಚಿಕಿತ್ಸೆ ನೀಡಲು ಎಲ್ಲಾ ಕ್ರಮಗಳನ್ನೂ ಕೈಗೊಳ್ಳರಾಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಯಾವ ಮೆಡಿಸಿನ್, ಯಾವ ಇಂಜಕ್ಷನ್ ಉಪಯೋಗ ಮಾಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ?

Sri Y. RAMAKRISHNA.—Medicine like Adrolin, Koromin and Oxygen.

ಶ್ರೀ ಎಚ್. ಪುಟ್ಟದಾಸ.—ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬ ರೋಗಿಗೆ ಟೆಸ್ಟ್ ಡೋಸ್ ಕೊಡುವುದಕ್ಕೆ ಹೋಗಿ ಯಾವುದೋ ರಾಂಗ್ ಇಂಜಕ್ಷನ್ ಕೊಟ್ಟು ಆ ರೋಗಿ ಸ್ಥಳದಲ್ಲೇ ಸತ್ತಿರುವುದು ನಿಜವೇ? ಹಾಗಿದ್ದರೆ ಆ ವೈದ್ಯರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ?

Sri Y. RAMAKRISHNA.—Let the hon. member write to me and I will call for the report.